ಮುದುಕ ಮಾತ್ರ ಇನ್ನೂ ಬೆಂಚಿನ ಮೇಲೆ ಕುಳಿತೇ ಇದ್ದ. ಅವನು ಸುಲಭವಾಗಿ ನನ್ನನ್ನು ಬಿಟ್ಟುಕೊಡುವ ಹಾಗೆ ಕಾಣಲಿಲ್ಲ. ಅವನ ಕಡೆ ನೋಡಲೇಬಾರದೆಂದು, ಸಾಲಿನಲ್ಲಿ ಮಗ್ನನಾದವನಂತೆ ನಿಂತುಕೊಂಡಿದ್ದೆನಾದರೂ ಮನಸ್ಸೆಲ್ಲ ಅವನ ಕಡೆಗೇ ಇತ್ತು. ಆಗಾಗ ಅವನು ಇನ್ನೂ ಅಲ್ಲೇ ಇದ್ದಾನೊ, ಹೊರಟು ಹೋಗಿದ್ದಾನೊ ಎಂದು ಕದ್ದು ಕದ್ದು ನೋಡಿದೆ. ಮುದುಕ ತನ್ನ ಕೈಚೀಲದಲ್ಲಿ ಏನೋ ಕಿತ್ತಾಡುತ್ತಿರುವಂತೆ ಕಂಡಿತು. ಟಿಕೀಟು ತೆಗೆಸಿದೊಡನೆ ಗದ್ದಲದಲ್ಲಿ ಅವನ ಕಣ್ಣಿಗೆ ಬೀಳದಂತೆ ಪಾರಾಗಿ ಹೋಗಿಬಿಡಬೇಕೆಂದು ಲೆಕ್ಕ ಹಾಕತೊಡಗಿದೆ.

ಟಿಕೀಟು ತೆಗೆಸಿದ ಮೇಲೆ ಮತ್ತೊಂದು ಸಲ ಆ ಮುದುಕ ಕುಳಿತಿದ್ದ ಜಾಗೆಯ ಕಡೆ ನೋಡಿದೆ. ಅವನು ಅಲ್ಲಿರಲಿಲ್ಲ. ಹೊರಟು ಹೋಗಿರಬಹುದು ಎನಿಸಿ ಮನಸ್ಸು ಹಗುರಾಯಿತು. ತಡ ಮಾಡಿದರೆ ಮತ್ತೆ ಕೆಲಸ ಕೆಟ್ಟೀತ್ತೆಂದು ಅವಸರದಿಂದ ಗೌರಿಯ ಕೈ ಹಿಡಿದುಕೊಂಡು ಬಾಗಿಲಿನ ಕಡೆ ನುಗ್ಗಿದೆ.

'ಸಾಹೇಬರ...'

ಬಾಗಿಲದಲ್ಲೇ ಮುದುಕನ ದನಿ. ಬೆಚ್ಚಿಬಿದ್ದು ನೋಡಿದೆ. ಮುದುಕ ಕೈಯಲ್ಲೊಂದು ಕಿತ್ತಳೆಹಣ್ಣನ್ನು ಹಿಡಿದುಕೊಂಡು ಧುತ್ತೆಂದು ಪ್ರತ್ಯಕ್ಷನಾದ.

'ಏನೂ ತಿಳಿಕೋಬಾರದು...'

ಸರಿ. ಕೊನೆಗೂ ಗುರಿ ತಲುಪಿಯೇಬಿಟ್ಟ. ಇನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎನಿಸಿ ಬಂದುದನ್ನು ಎದುರಿಸಲು ತಯಾರಾಗಿ ನಿಂತುಕೊಂಡೆ.

'ನನ್ನ ಪರವಾಗಿ... ದಯಮಾಡಿ ನಿಮ್ಮ ಮಗಳಿಗೆ ಈ ಹಣ್ಣು ಕೊಡಬೇಕು...' ಮುದುಕನ ದನಿಯಲ್ಲಿ ಯಾಚನೆ ಇತ್ತು.

ಒಂದು ಕ್ಷಣ ಏನು ಮಾಡಬೇಕೆಂದೇ ಹೊಳೆಯಲಿಲ್ಲ. ಮುದುಕನ ಬಗ್ಗೆ ಏನೇನೋ ಯೋಚಿಸಿ, ಏನೇನೋ ನಿರೀಕ್ಷಿಸುತ್ತ ದುಗುಡದಿಂದ ತುಂಬಿಕೊಂಡಿದ್ದ ಮನಸ್ಸು ಒಮ್ಮೆಲೇ ಬರಿದಾಗಿಬಿಟ್ಟಂತೆ ತೋರಿತು.

ಬರಿದೇ ಕೈ ಮುಂದೆ ಮಾಡಿದೆ. ಮುದುಕರು ಹಣ್ಣನ್ನು ನನ್ನ ಕೈಯಲ್ಲಿಟ್ಟು ಮೃದುವಾಗಿ ಒತ್ತಿದರು. ಮುಖದಲ್ಲಿ ಹೌದೋ ಅಲ್ಲವೋ ಎನ್ನುವಷ್ಟು ಮುಗುಳು ನಗೆ ಇತ್ತು. ನಾನು ನೋಡುತ್ತ ನಿಂತ ಹಾಗೆಯೇ ಅವಸರದಿಂದ, ಗಿಡ್ಡ ನಡಿಗೆಯಲ್ಲಿ ಲುಟುಲುಟು ಹೆಜ್ಜೆಯಿಡುತ್ತಾ, ತಿರುಗಿ ಕೂಡ ನೋಡದೇ, ಬಸ್ ಸ್ಟ್ಯಾಂಡಿನ ಒಳಗೆ ಹೊರಟು ಹೋದರು.

ಗೌರಿಗೂ ಅವರ ನಡತೆ ವಿಚಿತ್ರವೆನಿಸಿರಬೇಕು. 'ಯಾರಪ್ಪಾ ಅವರು?' ಎಂದಳು.

ಅವರು ಯಾರೆಂದು ನನಗಾದರೂ ಎಲ್ಲಿ ಗೊತ್ತಿತ್ತು? ಇಷ್ಟು ಹೊತ್ತು ಅವರೊಡನೆ ಮಾತಾಡಿದ್ದರೂ ಅವರ ಹೆಸರು ಏನೆಂದು ಕೂಡ ತಿಳಿದಿರಲಿಲ್ಲ. ಸುಮ್ಮನಿದ್ದೆ.

'ಈ ಹಣ್ಣು ಯಾಕ ಕೊಟ್ಟುಹೋದರು?' ಗೌರಿ ಮತ್ತೆ ಕೇಳಿದಳು.

ಅದೂ ನನಗೆ ಗೊತ್ತಿರಲಿಲ್ಲ.

ಒಂದು ಸಲ ಅವರು ಕೊಟ್ಟುಹೋಗಿದ್ದ ಆ ಕಿತ್ತಳೆ ಹಣ್ಣು ನೋಡಿದೆ. ಮತ್ತೆ ಅವರು ಹೊರಟು ಹೋದ ದಿಕ್ಕು ನೋಡಿದೆ.

ನಾಚಿಕೆಯಾಯಿತು.

*